**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**
**ಬೆಂಗಳೂರು-560 001**
**ಅಧಿಸೂಚನೆ ಸಂಖ್ಯೆ: ಎಸ್/03/1, ದಿನಾಂಕ ಮಾರ್ಚ್ 16, 2011**

**ಕವಿನಿಆಯೋಗ(ಲೈಸೆನ್ಸುದಾರರಿಂದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ದೃಢೀಕರಣ ಕಾರ್ಯಚೌಕಟ್ಟು) ನಿಯಮಾವಳಿಗಳು, 2011**

**ಪೀಠಿಕೆ**

ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇದ 181ರ ಜೊತೆಗೆ ಓದಿಕೊಳ್ಳಲಾದ ಪರಿಚ್ಛೇದ 86(1)(ಇ) ರ ಅಡಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅಧಿಸೂಚನೆ ಸಂಖ್ಯೆ ಎಸ್/03/1, ದಿನಾಂಕ 27.9.2004 ರ ಪ್ರಕಾರ ಕವಿನಿಆಯೋಗ (ಲೈಸೆನ್ಸುದಾರರಿಂದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ನಿಯಮಾವಳಿಗಳು, 2004ನ್ನು ಪ್ರಕಟಪಡಿಸಿತ್ತು. ಮೇಲಿನ ನಿಯಮಾವಳಿಯನ್ನು 23.1.2008 ರಂದು ಅಧಿಸೂಚನೆ ಸಂಖ್ಯೆ ಎಸ್/03/1 ಮೂಲಕ ತಿದ್ದಿ, ಬೆಸ್ಕಾಂ, ಮೆಸ್ಕಾಂ ಮತ್ತು ಸಿ.ಇ.ಎಸ್.ಸಿ ಗೆ ಕನಿಷ್ಟ 10% ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯತ್ ಖರೀದಿ ಹೊಣೆಗಾರಿಕೆ (ಆರ್.ಪಿ.ಒ) ಮತ್ತು ಹೆಸ್ಕಾಂ, ಜೆಸ್ಕಾಂ ಹಾಗೂ ಹುಕ್ಕೇರಿ ಕೋ-ಆಪರೇಟಿವ್ ಸೊಸೈಟಿಗೆ ಕನಿಷ್ಟ 7% ಆರ್.ಪಿ.ಒ ನಿಗಧಿಪಡಿಸಿತು.

ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, 14.1.2010 ರಂದು ಕೆ.ವಿ.ನಿ.ಆ (ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಸ್ಥಾವರಳಿಗೆ ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರದ ಷರತ್ತು ಹಾಗೂ ನಿಭಂದನೆಗಳು) ನಿಯಮಾವಳಿಗಳು, 2010 ಹೊರಡಿಸಿ ನವೀಕಿರಸಬಹದಾದ ಇಂಧನ ದೃಢೀಕರಣ ಪತ್ರದ (ಆರ್.ಇ.ಸಿ) ಮೂಲಕ ಆರ್.ಪಿ.ಒ ಪೂರೈಸಲು ಅನುಕೂಲ ಮಾಡಿತು.

ಆಗೋಯಗವು ಕ.ವಿ.ನಿ.ಆ (ಲೈಸೆನ್ಸುದಾರರಿಂದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ನಿಯಾವಳಿಗಳು, 2010 ರ ಕರಡನ್ನು ಹೊರಡಿಸಿ, ಆಸಕ್ತರಿಂದ ಸಲಹೆ/ಅಭಿಪ್ರಾಯಗಳನ್ನು ಆಹ್ವಾನಿಸಿತ್ತು. ಆಯೋಗವು 24.1.2010 ರಂದು ಸಾರ್ವಜನಿಕ ಸಭೆಯನ್ನೂ ಈ ವಿಷಯದಲ್ಲಿ ನಡೆಸಿತು.

ಆಯೋಗವು ಸ್ವೀಕರಿಸಿದ ಅಭಿಪ್ರಾಯ ಹಾಗೂ ಸಲಹೆಗಳನ್ನು ಯುಕ್ತವಾಗಿ ಪರಿಗಣಿಸಿ, ವಿದ್ಯುಚ್ಛಕ್ತಿ ಕಾಯಿದೆ 2003ರ(2003ರ ಕೇಂದ್ರೀಯ ಕಾಯಿದೆ 36)ಪರಿಚ್ಛೇದ 181ರ ಜೊತೆಗೆ ಓದಿಕೊಳ್ಳಲಾದ ಪರಿಚ್ಛೇದ 86(1)(ಇ)ರ ಅಡಿಯಲ್ಲಿ ಹಾಗೂ ಇದರ ಪರವಾಗಿ ದತ್ತವಾದ ಇತರ ಎಲ್ಲ ಅಧಿಕಾರಗಳ ಪ್ರಕಾರ ಮುಂದಿನಂತೆ ನಿಯಮಾವಳಿಯನ್ನು ರೂಪಿಸಿದೆ:

1. **ಕಿರು ಶೀರ್ಷಿಕೆ, ಅನ್ವಯಿಸುವಿಕೆ ಹಾಗೂ ಪ್ರಾರಂಭ** :
    1. ಈ ನಿಯಮಾವಳಿಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ನಿಯಮಾವಳಿಗಳು, 2011 ಎಂದು ಕರೆಯಬಹುದಾಗಿದೆ.
    2. ಈ ನಿಯಮವಾಳಿಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತವೆ.
    3. ಈ ನಿಯಮಾವಳಿಗಳು ಏಪ್ರಿಲ್ 2011ರ ಮೊದಲ ದಿನಾಂಕದಿಂದ ಜಾರಿಗೆ ಬರುತ್ತವೆ.

2. **ವಿವರಣೆ**: ಈ ನಿಯಮಗಳಲ್ಲಿ, ಅನ್ಯಥಾ ಅಗತ್ಯಪಡಿಸದ ಹೊರತು,

(ಎ) “ಕಾಯಿದೆ” ಎಂದರೆ, ವಿದ್ಯುಚ್ಛಕ್ತಿ ಕಾಯಿದೆ, 2003 ( 2003ರ ಕಾಯಿದೆ 36)

(ಬಿ) “ಕೇಂದ್ರಿಯ ಏಜೆನ್ಸಿ” ಎಂದರೆ, ಕೇಂದ್ರೀಯ ಆಯೋಗವು ಕೆ.ವಿ.ನಿ.ಆ (ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಸ್ಥಾವರಳಿಗೆ ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರದ ಷರತ್ತು ಹಾಗೂ ನಿಭಂದನೆಗಳು) ನಿಯಮಾವಳಿಗಳು, 2010 ಅಡಿಯಲ್ಲಿ ಕಾಲಕಾಲಕ್ಕೆ ನಿಯಮಿಸಬಹುದಾದ ಏಜೆನ್ಸಿ.

(ಸಿ) “ಕೇಂದ್ರೀಯ ಆಯೋಗ” ಎಂದರೆ, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೇಂ.ವಿ.ನಿ.ಆ).

(ಡಿ) “ ಆಯೋಗ” ಎಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕವಿನಿಆ).

(ಇ) “ವಿತರಣ ಲೈಸೆನ್ಸುದಾರ” ಎಂದರೆ, ತನ್ನ ಸರಬರಾಜು ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ವಿತರಣ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಅಧಿಕೃತ ಲೈಸೆನ್ಸುದಾರರು.

(ಎಫ್) “ಲೈಸೆನ್ಸುದಾರ” ಎಂದರೆ, ಕಾಯಿದೆಯ 14ರ ಅಡಿಯಲ್ಲಿ ಲೈಸೆನ್ಸನ್ನು ಪಡೆದ ವ್ಯಕ್ತಿ.

(ಜಿ) “ಎಂ.ಎನ್.ಆರ್.ಇ.”ಎಂದರೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ

(ಎಚ್) “ಆರ್.ಇ.ಸಿ” ಎಂದರೆ, ಕೇಂದ್ರೀಯ ಏಜೆನ್ಸಿಯು ನೀಡಿರುವ ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರ.

(ಐ) "ನವೀಕರಿಸಬಹುದಾದ ಇಂಧನ ಮೂಲಗಳು” ಎಂದರೆ, ಅಸಂಪ್ರದಾಯಿಕ ಅಥವಾ ಕಿರು ಜಲ, ಮೈಕ್ರೋ ಹೈಡಲ್, ಗಾಳಿ, ಸೌರಶಕ್ತಿ, ಜೈವಿಕ(ಕಬ್ಬಿನ ಸಿಪ್ಪೆ ಅಧಾರಿತ ಸಹ ಉತ್ಪಾದನೆಯೂ ಒಳಗೊಂಡ), ನಗರ/ಮುನಿಸಿಪಲ್ ತ್ಯಾಜ್ಯ ಸಂಸ್ಕರಣ ಮುಂತಾದ ನವೀಕಿರಸಬಹುದಾದ ವಿದ್ಯುತ್ ಉತ್ಪಾದನಾ ಮೂಲಗಳು ಅಥವಾ ಎಂ.ಎನ್.ಆರ್.ಇ, ಭಾರತ ಸರ್ಕಾರ ಅಥವಾ ಕರ್ನಾಟಕ ಸರ್ಕಾರವು ಅನುಮೋದಿಸಿರುವ ಇತರ ಇಂಧನ ಮೂಲಗಳು.

(ಜೆ) “ಆರ್.ಪಿ.ಒ” ಎಂದರೆ, ಆಯೋಗವು ಕಾಯಿದೆಯ ಪರಿಚ್ಛೇಧ 86(1)(ಇ)ಯ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿಯ ಹೊಣೆಗಾರಿಕೆ.

(ಕೆ) “ರಾಜ್ಯ” ಎಂದರೆ, ಕರ್ನಾಟಕ ರಾಜ್ಯ.

(ಎಲ್) “ರಾಜ್ಯ ಏಜೆನ್ಸಿ” ಎಂದರೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಆಧಾರಿತ ಯೋಜನೆಗಳಿಗೆ ಅಧಿಕೃತ ಮನ್ನಣೆ ನೀಡುವ ಹಾಗೂ ಆಯೋಗದ ನಿರ್ದೇಶನಗಳ ಪ್ರಕಾರ ಕಾರ್ಯಾಚರಣೆಯನ್ನು ಕೈಗೊಳ್ಳಲು ನಿಯಮಿತವಾದ ಏಜೆನ್ಸಿ.

(ಎಂ) “ರಾಜ್ಯ ಪ್ರಸರಣ ಸಂಸ್ಥೆ” ಎಂದರೆ, ಕಾಯಿದೆಯ ಪರಿಚ್ಛೇಧ 39ರ ಉಪ ಪರಿಚ್ಛೇಧ(1)ರ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿರುವ ಮಂಡಲಿ ಅಥವಾ ಕಂಪನಿ.

(ಎನ್) “ದರ” ಎಂದರೆ, ನವೀಕಿರಸಬಹುದಾದ ಇಂಧನ ಮೂಲಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮಾಡುವ ವಿದ್ಯುತ್ ಕೇಂದ್ರದಿಂದ ವಿತರಣ ಲೈಸೆನ್ಸುದಾರರಿಗೆ ವಿದ್ಯುತ್ ಮಾರಾಟ ಮಾಡಲು ಆಯೋಗವು ಗೊತ್ತುಪಡಿಸಿರುವ ದರಪಟ್ಟಿ.

(ಒ) “ವರ್ಷ”ಎಂದರೆ ಆರ್ಥಿಕ ವರ್ಷ.

2. ಕಾಯಿದೆಯಲ್ಲಿ ವಿವರಿಸಲ್ಪಟ್ಟಿದ್ದು, ಆದರೆ ಈ ನಿಯಮಾವಳಿಗಳಲ್ಲಿ ವಿವರಣೆಗೆ ಒಳಪಟ್ಟಿರದೆ ಬಳಸಿರುವ ಹಾಗೂ ವ್ಯಕ್ತಪಡಿಸಿರುವ ಪದಗಳು ಮತ್ತು ಅನಿಸಿಕೆಗಳು, ಕಾಯಿದೆಯಲ್ಲಿರುವ ಅರ್ಥವನ್ನೇ ಹೊಂದಿರತಕ್ಕದ್ದು.

3. **ಈ ನಿಯಮಾವಳಿಗಳು ಕೆಳಕಂಡವುಗಳಿಗೆ ಅನ್ವಯಿಸುತ್ತವೆ**:

(i) ಕರ್ನಾಟಕ ರಾಜ್ಯದಲ್ಲಿ ಕಾರ್ಯಾಚರಣೆ ನಡೆಸುವ ವಿತರಣ ಲೈಸೆನ್ಸುದಾರರು.

(ii) ನವೀಕರಿಸಬಹುದಾದ ಇಂಧನ ಮೂಲಗಳಿಂದ ಹೊರತುಪಡಿಸಿ ಬೇರೆ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ 5–ಮೆಗಾ ವಾಟ್‌ಗಿಂತ ಹೆಚ್ಚಿನ ಒಟ್ಟು ಸಾಮರ್ಥ್ಯವನ್ನು ಹೊಂದಿರುವ ಕ್ಯಾಪ್ಟಿವ್ ಸ್ಥಾವರ ಅಥವಾ ಸ್ಥಾವರಗಳಿಂದ ವಿದ್ಯುತ್ತನ್ನು ಪಡೆಯುತ್ತಿರುವ ಯಾವುದೇ ವ್ಯಕ್ತಿ ಮತ್ತು

(iii) 5 ಮೆಗಾ ವಾಟ್‌ಗಿಂತ ಅಧಿಕ ಒಪ್ಪಂದಿತ ವಿದ್ಯುತ್ ಹೊರೆಯನ್ನು ಹೊಂದಿದ್ದು, ನವೀಕರಿಸಬಹುದಾದ ಇಂಧನ ಮೂಲಗಲನ್ನು ಹೊರತುಪಡಿಸಿ, ಮುಕ್ತ ಮೂಲಗಳಿಂದ ವಿದ್ಯುತ್ ಖರೀದಿಸುವ ಯಾವುದೇ ವ್ಯಕ್ತಿ.

## 4. ನವೀಕರಿಸಬಹುದಾದ ವಿದ್ಯುತ್ ಮೂಲಗಳಿಂದ ಖರೀದಿಸಬೇಕಾದ ವಿದ್ಯುತ್ ಪ್ರಮಾಣ:

(i) ಪ್ರತಿಯೊಬ್ಬ ವಿತರಣ ಲೈಸೆನ್ಸುದಾರರು, ತಾವು ವರ್ಷವೊಂದರಲ್ಲಿ ಪಡೆಯುವ ಒಟ್ಟು ವಿದ್ಯುತ್ ಪ್ರಮಾಣಕ್ಕೆ ಅನುಗುಣವಾಗಿ ನವೀಕರಿಸಬಹುದಾದ ವಿದ್ಯುತ್ ಮೂಲಗಳಿಂದ ಕನಿಷ್ಟ ಕೆಳಗೆ ತಿಳಿಸಿರುವ ಪ್ರಮಾಣದಲ್ಲಿ ವಿದ್ಯುತ್ ಖರೀದಿಸತಕ್ಕದ್ದು:

| ವಿ.ಸಕಂಪೆನಿ | ಸೌರಶಕ್ತಿಯನ್ನು ಹೊರತುಪಡಿಸಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ಪಡೆಯಬೇಕಾದ ವಿದ್ಯುತ್ ಪ್ರಮಾಣ | ಸೌರಶಕ್ತಿ ವಿದ್ಯುತ್ ಖರೀದಿ ಹೊಣೆಗಾರಿಕೆ |
|---|---|---|
| ಬೆವಿಕಂಪೆನಿ | 10% | 0.25% |
| ಮವಿಕಂಪೆನಿ | 10% | 0.25% |
| ಸೆಸ್ಕ್ | 10% | 0.25% |
| ಹುವಿಕಂಪೆನಿ | 7% | 0.25% |
| ಗುವಿಕಂಪೆನಿ | 7% | 0.25% |
| ಹುಕ್ಕೇರಿ ಸೊಸೈಟಿ | 7% | 0.25% |

ಆದರೆ, ಕರ್ನಾಟಕ ರಾಜ್ಯದಲ್ಲಿ ಸೌರಶಕ್ತಿ ಮೂಲದಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ ಲಭ್ಯತೆ ಇಲ್ಲದಿದ್ದಲ್ಲಿ, ವಿತರಣ ಲೈಸೆನ್ಸುದಾರರು ಆ ವರ್ಷದ ತಮ್ಮ ಆರ್.ಪಿ.ಒ.ದ ಕೊರತೆಯ ಪ್ರಮಾಣದಷ್ಟು ವಿದ್ಯುತ್ತನ್ನು ಇತರ ನವೀಕರಿಸಬಹುದಾದ ಮೂಲಗಳಿಂದ ಅಥವಾ ಆರ್.ಇ.ಸಿ.ಯ ಮೂಲಕ ಖರೀದಿಸಬಹುದಾಗಿದೆ

(ii) ಮೇಲಿನ ಕಲಮು 3(ii)ರಲ್ಲಿ ತಿಳಿಸಿರುವಂತೆ, ಗ್ರಿಡ್ ಜಾಲಕ್ಕೆ ಸಂಪರ್ಕಗೊಂಡ ಪ್ರತಿಯೊಬ್ಬ ಕ್ಯಾಪ್ಟಿವ್ ವಿದ್ಯುತ್ ಗ್ರಾಹಕನು, ಕ್ಯಾಪ್ಟಿವ್ ಮೂಲಗಳಿಂದ ತಾನು ಬಳಸುವ ಒಟ್ಟಾರೆ ವಿದ್ಯುತ್ ಪ್ರಮಾಣದ ಶೇಕಡಾ 5ರಷ್ಟು ವಿದ್ಯುತ್ತನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.

(iii) ಮೇಲಿನ ಕಲಮು 3(iii)ರಲ್ಲಿ ತಿಳಿಸಿರುವಂತೆ, ಪ್ರತಿಯೊಬ್ಬ ಮುಕ್ತ ಮಾರುಕಟ್ಟೆ ಮೂಲ ವಿದ್ಯುತ್ ಗ್ರಾಹಕನು, ಮುಕ್ತ ಮಾರುಕಟ್ಟೆ ಮೂಲಗಳಿಂದ ತಾನು ಬಳಸುವ ಒಟ್ಟಾರೆ ವಿದ್ಯುತ್ ಪ್ರಮಾಣದ ಶೇಕಡಾ 5ರಷ್ಟು ವಿದ್ಯುತ್ತನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.

(iv) ಮೇಲೆ ನಿಗದಿಪಡಿಸಿರುವ ಮಿತಿಯ ಹೊರತಾಗಿಯೂ, ಹಾಲಿ ಇರುವ ಒಪ್ಪಂದಗಳ ಅಡಿಯಲ್ಲಿ, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿಯನ್ನು ಅಂತಹ ಒಪ್ಪಂದದ ಅವಧಿಯು ಊರ್ಜಿತದಲ್ಲಿರುವವರೆಗೆ ಮುಂದುವರೆಸತಕ್ಕದ್ದು ಹಾಗೂ ಅಂತಹ ವಿದ್ಯುತ್ ಖರೀದಿಯನ್ನು ವಿದ್ಯುತ್ ಖರೀದಿಯ ಹೊಣೆಗಾರಿಕೆಯ ಉದ್ದೇಶಕ್ಕಾಗಿ ಲೆಕ್ಕಕ್ಕೆ ಒಳಪಡಿಸತಕ್ಕದ್ದು.

(v) ಪ್ರತಿಯೊಬ್ಬ ವಿತರಣ ಲೈಸೆನ್ಸುದಾರರು, ಮುಂಬರುವ ವರ್ಷದಲ್ಲಿ ನವೀಕರಿಸಬಹುದಾದ ವಿದ್ಯುತ್ ಮೂಲಗಳಿಂದ ಖರೀದಿಸಬೇಕಾದ ವಿದ್ಯುತ್ ಪ್ರಮಾಣವನ್ನು ಶುಲ್ಕಗಳಿಂದ ನಿರೀಕ್ಷಿತ ಆದಾಯದ ವಿವರಗಳಲ್ಲಿ ನಮೂದಿಸತಕ್ಕದ್ದು. ಇದರಲ್ಲಿ ಖರೀದಿಯ ಮೂಲಗಳನ್ನು ತಿಳಿಸಿರತಕ್ಕದ್ದು.

5. **ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರ(ಆರ್.ಇ.ಸಿ)–** ಮೇಲಿನ ಕಲಮು (3) ರಲ್ಲಿ ಸೂಚಿಸಿರುವ ವಿತರಣ ಲೈಸೆನ್ಸುದಾರರು, ಕ್ಯಾಪ್ಟಿವ್ ವಿದ್ಯುತ್ ಖರೀದಿ ಗ್ರಾಹಕರು ಹಾಗೂ ಮುಕ್ತ ವಿದ್ಯುತ್ ಖರೀದಿ ಗ್ರಾಹಕರು, ಮೇಲಿನ ಕಲಮು4(1)ರಲ್ಲಿ ತಿಳಿಸಿರುವಂತೆ ಆರ್.ಪಿ.ಒ.ವನ್ನು ಹೋಂದಲು, ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಆರ್.ಇ.ಸಿ.ಯನ್ನು ಖರೀದಿಸಬಹುದಾಗಿದೆ.

**6. ರಾಜ್ಯ ಏಜೆನ್ಸಿ:**

1. ಈ ನಿಯಮಾವಳಿಗಳು ಜಾರಿಗೊಂಡ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ರಾಜ್ಯ ಏಜೆನ್ಸಿಯು, ಆಯೋಗದ ಪೂರ್ವಾನುಮೋದನೆಯೊಂದಿಗೆ ಈ ನಿಯಮಾವಳಿಗಳ ಅಧಿಕೃತ ಮನ್ನಣೆಗಾಗಿ ಷರತ್ತು ಹಾಗೂ ನಿಬಂಧನೆಗಳನ್ನು ರೂಪಿಸಿ ಅಧಿಸೂಚಿಸತಕ್ಕದ್ದು. ಅಂತಹ ಷರತ್ತು ಹಾಗೂ ನಿಬಂಧನೆಗಳನ್ನು ರೂಪಿಸುವಾಗ ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಸ್ಥಾವರಳಿಗೆ ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರದ ಷರತ್ತು ಹಾಗೂ ನಿಭಂದನೆಗಳು) ನಿಯಮಾವಳಿಗಳು, 2010 ಅಡಿಯಲ್ಲಿ ಕೇಂದ್ರೀಯ ಏಜೆನ್ಸಿಯು ನಿಗದಿಪಡಿಸಿರುವ ಷರತ್ತು ಹಾಗೂ ನಿಬಂಧನೆಗಳ ಮಾರ್ಗದರ್ಶನವನ್ನು ಸಾಮಾನ್ಯವಾಗಿ ಅನುಸರಿಸಬಹುದು.
2. ರಾಜ್ಯ ಏಜೆನ್ಸಿಯು, ಅಧಿಕೃತ ಮನ್ನಣೆ ಪಡೆದಿರುವ ವಿದ್ಯುತ್ ಉತ್ಪಾದಕರ ಮತ್ತು ಮೇಲೆ ಸೂಚಿಸಿರುವ ವಿದ್ಯತ್ ವಿತರಣಾ ಲೈಸೆನ್ಸುದಾರರು ಮತ್ತು ಇತರ ಗ್ರಾಹಕರ ಆರ್.ಪಿ.ಒ ಪಾಲನೆಯ ವಿವರಗಳನ್ನು ಒಳಗೊಂಡ ತ್ರೈಮಾಸಿಕ ವರದಿಗಳನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.
3. ಈ ನಿಯಮಾವಳಿಗಳ ಆಡಿಯಲ್ಲಿ ರಾಜ್ಯ ಏಜೆನ್ಸಿಯು ತನ್ನ ಕಾರ್ಯನಿರ್ವಹಣೆಯನ್ನು ಕೈಗೊಳ್ಳಲು ಅನುಕೂಲವಾಗುವಂತೆ, ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಉತ್ಪಾದಕರು ಕಟ್ಟಬೇಕಾದ ಶುಲ್ಕವನ್ನು ಆಯೋಗವು ಕಾಲಕಾಲಕ್ಕೆ ವಿಧಿಸಬಹುದು.

7. **ಅಧಿಕೃತ ಮಾನ್ಯಗೊಳಿಸುವಿಕೆಗಾಗಿ ಷರತ್ತುಗಳು**: ಆರ್.ಇ.ಸಿ.ಯನ್ನು ಪಡೆಯುವ ಸಲುವಾಗಿ ರಾಜ್ಯ ಏಜೆನ್ಸಿಗೆ ಅಧಿಕೃತ ಮನ್ನಣೆ ದೃಢೀಕರಣಕ್ಕಾಗಿ ಮನವಿ ಸಲ್ಲಿಸುವ ರಾಜ್ಯದಲ್ಲಿರುವ ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಉತ್ಪಾದಕರು ಕೆಳಕಂಡ ಷರತ್ತುಗಳನ್ನು ಪೂರೈಸತಕ್ಕದ್ದು:

ಎ. ವಿದ್ಯುತ್ ಉತ್ಪಾದನಾ ಕಂಪೆನಿಗಳು, ಅಂತಹ ಉತ್ಪಾದಿತ ವಿದ್ಯುತ್ತನ್ನು ಮಾರಾಟ ಮಾಡಲು ವಿದ್ಯುತ್ ವಿತರಣಾ ಕಂಪೆನಿಗಳೊಂದಿಗೆ ಚಾಲ್ತಿಯಲ್ಲಿರುವ ಯಾವುದೇ ವಿದ್ಯುತ್ ಖರೀದಿ ಒಪ್ಪಂದಗಳು ಇರತಕ್ಕದ್ದು.

ಬಿ. ವಿದ್ಯುತ್ ಖರೀದಿ ಒಪ್ಪಂದವು ಅಧಿಪೂರ್ವವಾಗಿ ಅಂತ್ಯಗೊಂಡರೆ, ಹಾಗೆ ಅಂತ್ಯಗೊಂಡ ದಿನಾಂಕದಿಂದ ಒಂದು ವರ್ಷದವರೆಗೆ ಅಥವಾ ವಿದ್ಯುತ್ ಖರೀದಿ ಒಪ್ಪಂದವು ಮುಕ್ತಾಯಗೊಳ್ಳಬೇಕಾಗಿದ್ದ ನಿಗದಿತ ದಿನಾಂಕ, ಇವೆರಡರಲ್ಲಿ ಯಾವುದು ಮೊದಲೋ, ಆ

ಅವಧಿಯವರೆಗೆ ಅಂತಹ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಒಳಪಟ್ಟಿರುವ ವಿದ್ಯುತ್ ಉತ್ಪಾದನೆಗೆ ಆರ್.ಇ.ಸಿ.ಯೋಜನೆಯಲ್ಲಿ ಭಾಗವಹಿಸಲು ಆ ವಿದ್ಯುತ್ ಉತ್ಪಾದನಾ ಕಂಪೆನಿಯು ಅರ್ಹತೆ ಹೊಂದಿರುವುದಿಲ್ಲ.

ಸಿ. ಆರ್.ಇ.ಸಿ. ಯೋಜನೆಯನ್ನು ಇಚ್ಛಿಸುವ ವಿದ್ಯುತ್ ಉತ್ಪಾದನಾ ಕಂಪನಿಯು, ತಾನು ಉತ್ಪಾದಿಸಿದ ವಿದ್ಯುತ್ತನ್ನು, ಆಯೋಗವು ತನ್ನ ದರ ಆದೇಶದಲ್ಲಿ ಹಿಂದಿನ ವರ್ಷಕ್ಕೆ ನಿಗದಿಪಡಿಸಿದ ಒಟ್ಟುಗೂಡಿಸಿದ ವಿದ್ಯುತ್ ಖರೀದಿ ವೆಚ್ಚವನ್ನು ಹಣದುಬ್ಬರದ ಪ್ರಮಾಣದಲ್ಲಿ ಹೆಚ್ಚಿಸಿದ ದರದಲ್ಲಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೇ ಮಾರಾಟ ಮಾಡತಕ್ಕದ್ದು.

ಡಿ. ನವೀಕರಿಸಬಹುದಾದ ಇಂಧನ ಮೂಲಗಳನ್ನು ಆಧರಿಸಿರುವ ಕ್ಯಾಪ್ಟಿವ್ ವಿದ್ಯುತ್ ಉತ್ಪಾದಕರು, ಕ್ಯಾಪ್ಟಿವ್ ವಿದ್ಯುತ್ ಬಳಕೆಗೆ ಉಪಯೋಗಿಸಿದ ವಿದ್ಯುತ್ತನ್ನೂ ಸೇರಿದಂತೆ, ತಮ್ಮ ವಿದ್ಯುತ್ ಸ್ಥಾವರದಿಂದ ಉತ್ಪಾದಿಸಿದ ವಿದ್ಯುತ್ತಿಗೆ ಆರ್.ಇ.ದೃಢೀಕರಣ ಪತ್ರದ ಅಧಿಕೃತ ಮಾನ್ಯತೆ ಪಡೆಯಲು ಅರ್ಹತೆ ಹೊಂದಿರುತ್ತಾರೆ.

ಇ. ಈ ನಿಯಮಗಳಿಗೆ ವಿರುದ್ಧವಾಗಿ ಯಾವುದೇ ವಿದ್ಯುತ್ ಉತ್ಪಾದನಾ ಕಂಪೆನಿಗಳು ಅಧಿಕೃತ ಮಾನ್ಯತೆ ಪಡೆದರೆ, ಆಯೋಗವು ಸ್ವಪ್ರೇರಿತವಾಗಿ ಅಥವಾ ಇತರೆ ರೀತಿಯಲ್ಲಿ, ಅಂತಹ ವಿದ್ಯುತ್ ಉತ್ಪಾದನಾ ಕಂಪೆನಿಗಳಿಗೆ ನೋಟೀಸನ್ನು ಜಾರಿಗೊಳಿಸಿ, ಅಧಿಕೃತ ಮಾನ್ಯತೆಯನ್ನು ರದ್ದುಪಡಿಸಬಹುದಾಗಿದೆ.

8. **ವಿತರಣ ಲೈಸೆನ್ಸುದಾರರು ಆರ್.ಪಿ.ಒ. ನಿಯಮಗಳನ್ನು ಪಾಲಿಸದಿರುವುದು**:

1. ಮೇಲಿನ ನಿಯಮ 3ರಲ್ಲಿ ಸೂಚಿಸಲ್ಪಟ್ಟಿರುವ ವಿತರಣ ಲೈಸೆನ್ಸುದಾರ ಅಥವಾ ಯಾವುದೇ ಇತರ ಗ್ರಾಹಕರು, ಈ ನಿಯಮಗಳಲ್ಲಿ ತಿಳಿಸಿರುವಂತೆ, ಯಾವುದೇ ಒಂದು ವರ್ಷದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಖರೀದಿ ನಿಯಮಾವಳಿಗಳ ಪ್ರಕಾರ ಆರ್.ಪಿ.ಒ ಅನ್ನು ಪಾಲಿಸುವಲ್ಲಿ ವಿಫಲರಾದರೆ, ಅಂತಹ ವಿತರಣಾ ಲೈಸೆನ್ಸುದಾರ ಅಥವಾ ಗ್ರಾಹಕರು ಆಯೋಗವು ನಿಗದಿಪಡಿಸುವ ಮೊಬಲಗನ್ನು ಠೇವಣಿಯ ರೂಪದಲ್ಲಿ ಪ್ರತ್ಯೇಕ ನಿದಿಯ ಲೆಕ್ಕಕ್ಕೆ ಪಾವತಿಸಿ ಆಯೋಗದ ಆದೇಶದಂತೆ ಸೃಷ್ಟಿಸಿ ನಿರ್ವಹಿಸತಕ್ಕದ್ದು.
2. ವಿತರಣ ಲೈಸೆನ್ಸುದಾರರು ಅಥವಾ ಇತರ ಗ್ರಾಹಕರು ಕಾಲಕಾಲಕ್ಕೆ ಆಯೋಗದ ಪೂರ್ವಾನುಮತಿ ಪಡೆದು, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಬೆಂಬಲಿಸಲು ಅಥವಾ ವಿದ್ಯುತ್ ಉಳಿತಾಯ ಕ್ರಮಗಳಿಗಾಗಿ ಹಾಗೆ ವಸೂಲಾದ ಮೊಬಲಗನ್ನು ಉಪಯೋಗಿಸಿಕೊಳ್ಳತಕ್ಕದ್ದು.
3. ಯಾವುದೇ ವರ್ಷದಲ್ಲಿ, ನವೀಕಿರಸಬಹುದಾದ ಇಂಧನ ಮೂಲಗಳ ವಿದ್ಯುತ್ ಅಥವಾ ಆರ್.ಇ.ಸಿ. ಅಲಭ್ಯತೆಯ ಕಾರಣದಿಂದಾಗಿ, ಆರ್.ಪಿ.ಒ ಪಾಲನೆಯಲ್ಲಿ ಯಾವುದೇ ತೊಂದರೆ ಕಂಡುಬಂದರೆ, ಮೇಲಿನ ನಿಯಮ 3ರಲ್ಲಿ ಸೂಚಿಸಲ್ಪಟ್ಟಿರುವ ವಿತರಣ ಲೈಸೆನ್ಸುದಾರ ಅಥವಾ ಯಾವುದೇ ಇತರ ಗ್ರಾಹಕರು ಅಂತಹ ಅನುಸರಣೆಯ ಅಗತ್ಯತೆಯನ್ನು ಮುಂದಿನ ವರ್ಷಕ್ಕೆ ಕೊಂಡೊಯ್ಯಬಹುದೆಂದು ಆಯೋಗವು ಅನುಮತಿ ನೀಡಬಹುದು.

9. **ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಿದ ವಿದ್ಯುಚ್ಛಕ್ತಿಗೆ ವಿದ್ಯುತ್ ದರವನ್ನು ನಿಗದಿಪಡಿಸುವುದು:**

1. ಆಯೋಗವು ಸ್ವಇಚ್ಛೆಯಿಂದ ಅಥವಾ ವಿದ್ಯುತ್ ಉತ್ಪಾದಕರು ಅಥವಾ ವಿತರಣ ಲೈಸೆನ್ಸುದಾರರು ಸಲ್ಲಿಸುವ ಅರ್ಜಿಯ ಮೇರೆಗೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖಾರೀದಿಸಲು .ಯಾವುದೇ ಸಮಯದಲ್ಲಾಗಲಿ ವಿದ್ಯುತ್ ದರವನ್ನು ನಿಗದಿಪಡಿಸಬಹುದಾಗಿದೆ.

ಆದರೆ, ಈ ನಿಯಮಾವಳಿಗಳು ಜಾರಿಗೆ ಬರುವ ಮುಂಚಿತವಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಕಾಯಿದೆ, 1999ರ ಪರಿಚ್ಛೇಧ 27ರ ಉಪ ಪರಿಚ್ಛೇಧ (2)ರ ಅಡಿಯಲ್ಲಿ, ವಿದ್ಯುತ್ ದರವು ಒಳಗೊಂಡಂತೆ, ಆಯೋಗದಿಂದ ಅನುಮೋದಿತಗೊಂಡ ವಿದ್ಯುತ್ ಖರೀದಿ ಒಪ್ಪಂದವು, ಅನುಮೋದಿತವಾಗಿವೆ ಎಂದು ಭಾವಿಸಿ, ವಿದ್ಯುತ್ ಖರೀದಿ ಒಪ್ಪಂದದಲ್ಲಿ ಸೂಚಿಸಿರುವ ಅಂತಹ ಅವಧಿಯವರೆಗೆ ಮುಂದುವರೆಸತಕ್ಕದ್ದು.

ಆದರೆ, ಮುಂದುವರಿಕೆಯಾಗಿ, ಅಧಿನಿಯಮದ ಪರಿಚ್ಛೇಧ 63ರ ಅಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗದರ್ಶನಗಳ ಅನುಸಾರ ಪಾರದರ್ಶಕ ಟೆಂಡರ್ ಕಾರ್ಯಪ್ರಕ್ರಿಯೆ ಮೂಲಕ ಗೊತ್ತುಪಡಿಸಲ್ಪಟ್ಟ ವಿದ್ಯುತ್ ದರವನ್ನು ಆಯೋಗವು ಅಳವಡಿಸಿಕೊಳ್ಳತಕ್ಕದ್ದು.

2. ಆಯೋಗವು ಕಲಮು2(i) ರಲ್ಲಿ ತಿಳಿಸಿರುವಂತೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿಯ ಪ್ರತಿ ಪ್ರವರ್ಗಕ್ಕೆ ಪ್ರತ್ಯೇಕವಾಗಿ ವಿದ್ಯುತ್ ದರವನ್ನು ಗೊತ್ತುಪಡಿಸತಕ್ಕದ್ದು.
3. ಆಯೋಗವು ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ದರವನ್ನು ನಿಗದಿಪಡಿಸುವಾಗ ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ರಾಷ್ಟ್ರೀಯ ವಿದ್ಯುಚ್ಛಕ್ತಿ ನೀತಿ, ವಿದ್ಯುತ್ ದರ ನೀತಿಯು ನಿಗದಿಪಡಿಸಬಹುದಾದ ತತ್ವಗಳು ಹಾಗೂ ಕ್ರಮಾನುಸರಣೆಯನ್ನು ಅನುಸರಿಸತಕ್ಕದ್ದು.
4. ಆಯೋಗವು ವಿದ್ಯುತ್ ದರವನ್ನು ನಿಗದಿಪಡಿಸುವಾಗ, ಪ್ರತಿಯೊಂದು ಪ್ರವರ್ಗದ ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ, ತಾಂತ್ರಿಕತೆ, ಇಂಧನ, ಮಾರುಕಟ್ಟೆ ಅಂಶಗಳು, ಪರಿಸರ ಅನುಕೂಲತೆಗಳು ಹಾಗೂ ಸಾಮಾಜಿಕ ಕೊಡುಗೆ ಮತ್ತು ಇತರ ಸಂಬಂಧಪಟ್ಟ ಅಂಶಗಳನ್ನು ಪರಿಗಣಿಸಬಹುದಾಗಿದೆ.

10. **ತಿದ್ದುಪಡಿಗೆ ಅಧಿಕಾರ:** ಆಯೋಗವು ಕಾಲಾನುಕಾಲಕ್ಕೆ ಈ ನಿಯಮಾವಳಿಗಳಿಗೆ ಯಾವುದೇ ಅಂಶದ ಸೇರ್ಪಡೆ, ವ್ಯತ್ಯಯ, ಮಾರ್ಪಾಡು, ಬದಲಾವಣೆ ಅಥವಾ ತಿದ್ದುಪಡಿಯನ್ನು ಮಾಡಬಹುದಾಗಿದೆ.

11. **ಮಾಹಿತಿ ಕೇಳಿಕೆಯ ಹಕ್ಕು:** ಆಯೋಗವು, ಈ ನಿಯಮಾವಳಿಗಳ ಪಾಲನೆಯು ಆಗುತ್ತಿರುವ ಬಗ್ಗೆ ಉಸ್ತುವಾರಿಯ ಸಲುವಾಗಿ, ಮೇಲಿನ ಕಲಮು 3ರಲ್ಲಿ ಸೂಚಿಸಿರುವ ವಿತರಣ ಲೈಸೆನ್ಸುದಾರರು ಹಾಗೂ ಇತರ ಗ್ರಾಹಕರಿಂದ ಅವಶ್ಯವೆನಿಸಿದ ದಾಖಲೆ ಅಥವಾ ಮಾಹಿತಿಗಳನ್ನು ಕೇಳಬಹುದಾಗಿದೆ.

12. **ತೊಡಕು ನಿವಾರಣೆ ಹಕ್ಕು:** ಈ ನಿಯಮಾವಳಿಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಅಡಚಣೆ ಉಂಟಾದರೆ, ಆಯೋಗವು ಸ್ವಪ್ರೇರಿತವಾಗಿ ಅಥವಾ ಇತರೆ ರೀತಿಯಲ್ಲಿ, ಯಾವುದೇ ಸಮಯದಲ್ಲಿ ಅಂತಹ ತೊಡಕನ್ನು ನಿವಾರಿಸುವ ಹಕ್ಕನ್ನು ಹೊಂದಿರುತ್ತದೆ.

13. **ರದ್ದತಿ ಮತ್ತು ಬಳಕೆ:**
    (1) ಕವಿನಿ ಆಯೋಗ (ವಿತರಣ ಲೈಸೆನ್ಸುದಾರರು ನವೀಕರಿಸಬಹುದಾದ ವಿದ್ಯು ಮೂಲಗಳಿಂದ ವಿದ್ಯುತ್ ಖರೀದಿ ಮಾಡುವುದು)ನಿಯಮಾವಳಿಗಳು 2004, ಹಾಗೂ ಇದರ ತಿದ್ದುಪಡಿಗಳು ಈಗಿನಿಂದ ರದ್ದಾಗಿವೆ.
    (2) ಅಂತಹ ರದ್ದತಿಯು ಇದ್ದರೂ ಸಹ, ಅಂತಹ ರದ್ದತಿಯ ನಿಯಮಗಳ ಅಡಿಯಲ್ಲಿ ಯಾವುದೇ ಕೃತ್ಯ/ಕ್ರಮ ತೆಗೆದುಕೊಂಡರೆ, ಕೈಗೊಳ್ಳಲಾಗಿದೆ ಎಂದು ಅಭಿಪ್ರಾಯ ಹೊಂದಿದರೆ ಅಥವಾ ಯಾವುದೇ ಅಧಿಸೂಚನೆ, ತಪಾಸಣೆ, ಆದೇಶ ಅಥವಾ ಸೂಚನೆ ಹೊರಡಿಸಿದರೆ ಅಥವಾ ಯಾವುದೇ ನೇಮಕಾತಿ, ಸ್ಥಿರೀಕರಣ ಅಥವಾ ಪ್ರಕಟಣೆ ಮಾಡಿದ್ದರೆ ಅಥವಾ .ಯಾವುದೇ

ಪರವಾನಗಿ, ಅನುಮತಿ,ಅಧಿಕೃತತೆ ಅಥವಾ ವಿನಾಯಿತಿ ನೀಡಿದ್ದರೆ, ಈ ನಿಯಮಾವಳಿಗಳ ಅವಕಾಶಗಳಿಗೆ ಅನುರೂಪತೆ ಇಲ್ಲದಿರುವುದರಿಂದ ಕೈಗೊಳ್ಳಲಾಗಿದೆ ಎಂದು ಅಥವಾ ಈ ನಿಯಮಾವಳಿಗೆ ವಿರುದ್ಧ ಇಲ್ಲದ ಪಕ್ಷದಲ್ಲಿ, ಅಂತಹ ಕೃತ್ಯ/ಕ್ರಮಗಳನ್ನು ಈ ನಿಯಮಾವಳಿಗಳ ಸಂಬಂಧಪಟ್ಟ ಆಯಾ ಕಲಮುಗಳಲ್ಲಿ ಒಳಪಡಿಸಲಾಗಿದೆ ಎಂದು ಭಾವಿಸತಕ್ಕದ್ದು.

ಆಯೋಗದ ಆದೇಶದ ಮೇರೆಗೆ

ಸಹಿ

ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛ್ಃಅಕ್ತಿ ನಿಯಂತ್ರಣ ಆಯೋಗ